ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿ ಕಛೇರಿ,
ನವನಗರ, ಪಿ.ಬಿ.ರೋಡ, ಹುಬ್ಬಳ್ಳಿ - 580 025.
Tel: +91836 2324196

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Company Office,
Navanagar, P.B.Road, Hubballi - 580025
E-mail Id: eehrd.hescom@gmail.com

Corporate Identity Number (CIN): U31401KA2002SGC030437

ಕ್ರ.ಸಂ:ಹೆಸ್ಕಾಂ/ಪ್ರ.ವ್ಯ(ಆ&ಮಾ.ಸಂ.ಅ)/ಇಇ(ಮಾ.ಸಂ.ಅ&ಕೈ.ತ.ಕೇಂ)/25-26/ 045-5024 ದಿ: 29 AUG 2025

## ಕಛೇರಿ ಜ್ಞಾಪನಾ ಪತ್ರ

ವಿಷಯ: ಎಸ್.ಎಸ್.ಎಲ್.ಸಿ ಪಾಸಾದ ನಿರ್ವಹಣಾ ಸಿಬ್ಬಂದಿಯಿಂದ ಮಾಪಕ ಓದುಗ / ಮೇಲ್ವಿಚಾರಕ /ಸಹಾಯಕ ಉಗ್ರಾಣ ಪಾಲಕ/ಆಪರೇಟರ್ ಹುದ್ದೆಗೆ ಬಡ್ತಿ ಹೊಂದಲು ಪದೋನ್ನತಿ ಪೂರ್ವ ತರಬೇತಿ(ತಂಡ-29) ಯನ್ನು ಆಯೋಜಿಸುವ ಕುರಿತು.

ಉಲ್ಲೇಖ: ಅನುಮೋದಿತ ಪಿ. ಎಲ್. ಒ ಕಡತ ಸಂಖ್ಯೆ: 1223/13-14 ಪ್ಯಾರಾ ಸಂಖ್ಯೆ: 494 ದಿನಾಂಕ: 23.06.2025

*********

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಎಸ್.ಎಸ್.ಎಲ್.ಸಿ ಪಾಸಾದ ನಿರ್ವಹಣಾ ಸಿಬ್ಬಂದಿಯಿಂದ ಮಾಪಕ ಓದುಗ/ಮೇಲ್ವಿಚಾರಕ/ಸಹಾಯಕ ಉಗ್ರಾಣ ಪಾಲಕ/ಆಪರೇಟರ್ ಹುದ್ದೆಗೆ ಪದೋನ್ನತಿ ನೀಡುವ ಪೂರ್ವದಲ್ಲಿ ಕ.ವಿ.ಮಂ. ನೇಮಕಾತಿ ಮತ್ತು ಬಡ್ತಿ ನಿಯಮಾವಳಿಗಳು 1999 ರ ಪ್ರಕಾರ ಪದೋನ್ನತಿ ಪೂರ್ವ ತರಬೇತಿಯು ಕಡ್ಡಾಯವಾಗಿರುತ್ತದೆ.

ಆದ್ದರಿಂದ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: **09.09.2025** ರಿಂದ **17.10.2025** ರವರೆಗೆ (ತಂಡ-29) ಒಟ್ಟು 28 ದಿನಗಳ (Working Days) ಪದೋನ್ನತಿ ಪೂರ್ವ ತರಬೇತಿಯನ್ನು ಕೈಗಾರಿಕಾ ತರಬೇತಿ ಕೇಂದ್ರ, ಹು.ವಿ.ಸ.ಕಂ.ನಿ., ಕಾರವಾರ ರಸ್ತೆ, ಹುಬ್ಬಳ್ಳಿಯಲ್ಲಿ ಆಯೋಜಿಸಲು ಆದೇಶಿಸಲಾಗಿದೆ. ಕಾರ್ಯ ಮತ್ತು ಪಾಲನಾ ವೃತ್ತ ಮಟ್ಟದ ಜೇಷ್ಠತಾ ಪಟ್ಟಿ ಆಧಾರದ ಮೇಲೆ ಸದರಿ ತರಬೇತಿಗೆ ನಿಯೋಜಿಸಬೇಕಾದ ವೃತ್ತವಾರು ಅಭ್ಯರ್ಥಿಗಳ ಸಂಖ್ಯೆ ಈ ಕೆಳಗಿನಂತಿರುತ್ತದೆ.

| ಅ. ಸಂ. | ವೃತ್ತ | ಜೇಷ್ಠತಾ ಪಟ್ಟಿ ಆಧಾರದ ಮೇಲೆ ನಿಯೋಜಿಸಬೇಕಾದ ಅರ್ಹ ಅಭ್ಯರ್ಥಿಗಳ ಸಂಖ್ಯೆ |
|---|---|---|
| 1 | ಗದಗ | 08 |
| 2 | ಹಾವೇರಿ | 08 |
| 3 | ಶಿರಸಿ | 07 |
| 4 | ಬೆಳಗಾವಿ | 04 |
| 5 | ಚಿಕ್ಕೋಡಿ | 04 |
| 6 | ಬಾಗಲಕೋಟ | 04 |
| 7 | ವಿಜಯಪೂರ | 05 |
| ಒಟ್ಟು | | **40** |

ಆಯಾ ವೃತ್ತ ಕಛೇರಿಯಿಂದ ಕಛೇರಿ ಜ್ಞಾಪನಾ ಪತ್ರದ ಮೂಲಕ ಮೇಲೆ ಸೂಚಿಸಿರುವ ಸಂಖ್ಯೆಗಳಷ್ಟು ಅರ್ಹ ಅಭ್ಯರ್ಥಿಗಳನ್ನು ಜೇಷ್ಠತಾ ಪಟ್ಟಿ ಆಧಾರದ ಮೇಲೆ ತರಬೇತಿಗೆ ನಿಯೋಜಿಸುವುದು.

ತರಬೇತಿಯ ಸಂಯೋಜಕರು : ಶ್ರೀಮತಿ. ನಿರುಪಮಾ ತೋಟದ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು(ವಿ)

ತರಬೇತಿಗೆ ಆಗಮಿಸುವ ಅಭ್ಯರ್ಥಿಗಳಿಗೆ ಸೂಚನೆ :

1) ದಿನಾಂಕ: **09.09.2025** ರಂದು ಬೆಳಿಗ್ಗೆ **09.30** ಗಂಟೆಗೆ ಕೈಗಾರಿಕಾ ತರಬೇತಿ ಕೇಂದ್ರ, ಹು.ವಿ.ಸ.ಕಂ.ನಿ., ಕಾರವಾರ ರಸ್ತೆ, ಹುಬ್ಬಳ್ಳಿ ಕಛೇರಿಯಲ್ಲಿ ವರದಿ ಮಾಡಿಕೊಳ್ಳುವುದು.
2) ಹೆಸ್ಕಾಂ ಕಂಪನಿಯ ಗುರುತಿನ ಚೀಟಿಯನ್ನು ಧರಿಸುವುದು ಕಡ್ಡಾಯವಾಗಿರುತ್ತದೆ.
3) ಶಿಕ್ಷಣಾರ್ಥಿಗಳು ಸಮವಸ್ತ್ರ (Uniform)ದಲ್ಲಿ ಇರತಕ್ಕದು.
4) ಇತ್ತೀಚಿಗೆ ತೆಗೆಸಲಾದ ಪಾಸಪೋರ್ಟ ಗಾತ್ರದ ಒಂದು ಭಾವ ಚಿತ್ರವನ್ನು ತರಬೇತಿಗೆ ವರದಿ ಮಾಡಿಕೊಳ್ಳುವ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು
5) ಶಿಕ್ಷಣಾರ್ಥಿಗಳು ಮೊಬೈಲ್‌ಗಳನ್ನು ತರಬೇತಿ ಕೇಂದ್ರದ ಆವರಣದಲ್ಲಿ ತೆಗೆದುಕೊಂಡು ಬರುವಂತಿಲ್ಲ.
6) ತಂಬಾಕು, ಮದ್ಯಪಾನ ಮತ್ತು ಧೂಮಪಾನ ಸೇವನೆಯನ್ನು ತರಬೇತಿ ಕೆಂದ್ರದಲ್ಲಿ ನಿಷೇಧಿಸಿದೆ.
7) ಶಿಕ್ಷಣಾರ್ಥಿಗಳು ತರಬೇತಿ ಕೇಂದ್ರದ ಸ್ವಚ್ಛತೆಯನ್ನು ಕಡ್ಡಾಯವಾಗಿ ಕಾಪಾಡತಕ್ಕದ್ದು
8) ಔಷಧೋಪಚಾರ (Under Medication) ದಲ್ಲಿರುವ ಶಿಕ್ಷಣಾರ್ಥಿಗಳು ಅವಶ್ಯಕ ಔಷಧಿಗಳನ್ನು ತಪ್ಪದೇ ತರುವುದು.
9) ತರಬೇತಿಯ ಅವಧಿಯಲ್ಲಿ ಶಿಕ್ಷಣಾರ್ಥಿಗಳು ಯಾವುದೇ ರಜೆಗಳನ್ನು ಪಡೆಯಲು ಅವಕಾಶವಿರುವುದಿಲ್ಲ.
10) ತರಬೇತಿಯ ಅವಧಿಯಲ್ಲಿ ಗೈರು ಹಾಜರಾಗುವ ಶಿಕ್ಷಣಾರ್ಥಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.
11) ಮಧ್ಯಾಹ್ನದ ಊಟ ಹಾಗೂ ವಸತಿಯ ವ್ಯವಸ್ಥೆಯನ್ನು ತರಬೇತಿಗೆ ಹಾಜರಾಗುವ ಶಿಕ್ಷಣಾರ್ಥಿಗಳೇ ಮಾಡಿಕೊಳ್ಳುವುದು.
12) ನಿಗಮದಲ್ಲಿ ಜಾರಿಯಲ್ಲಿರುವ ಸೇವಾ ನಿಬಂಧನೆಗಳನುಸಾರ, ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗೆ ತರಬೇತಿಗೆ ಹಾಜರಾಗುವ ಶಿಕ್ಷಣಾರ್ಥಿಗಳು ಅರ್ಹರಾಗಿರುತ್ತಾರೆ.
13) ತರಬೇತಿಯ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ.
    I. ಪ್ರತಿ ದಿನ ತರಬೇತಿ ಕೇಂದ್ರದ ಮುಖ್ಯ ದ್ವಾರವನ್ನು ಬೆಳಗ್ಗೆ 10.00 ಗಂಟೆಗೆ ಮುಚ್ಚಲಾಗುವುದು.
    II. ಪ್ರತಿ ದಿನ ತರಬೇತಿ ಕೇಂದ್ರದಲ್ಲಿ ಬೆಳಗ್ಗೆ 10 : 00 ಕ್ಕೆ ತರಬೇತಿ ಕೊಠಡಿಯಲ್ಲಿ ಹಾಜರಿರಬೇಕು.
    III. ದಿನದ ಮೊದಲ ತರಗತಿಯ ಅವಧಿ: ಬೆಳಗ್ಗೆ 10:30 ರಿಂದ ಮಧ್ಯಾಹ್ನ 1:30 ರವರೆಗೆ
    IV. ದಿನದ ಎರಡನೇಯ ತರಗತಿಯ ಅವಧಿ: ಮಧ್ಯಾಹ್ನ 2:30 ರಿಂದ ಸಾಯಂಕಾಲ 5:30 ರವರೆಗೆ
    V. ಮಧ್ಯಾಹ್ನದ ಊಟದ ಅವಧಿ: 1:30 ರಿಂದ 2:30 ರವರೆಗೆ
    VI. ಚಹಾದ ಅವಧಿ: ಮುಂಜಾನೆ 12:00 ರಿಂದ 12:15 ರವರೆಗೆ ಹಾಗೂ ಸಾಯಂಕಾಲ 4:00 ರಿಂದ 4:15 ರವರೆಗೆ

**ತರಬೇತಿಯ ಅವಧಿಯಲ್ಲಿ ಶಿಕ್ಷಣಾರ್ಥಿಗಳು ಸಮಯ ಪಾಲನೆ ಮಾಡುವುದು.**

ಪ್ರಧಾನ ವ್ಯವಸ್ಥಾಪಕರು,
ಆ. ಮತ್ತು ಮಾ.ಸಂ.ಅ.,

ಪ್ರತಿಗಳು:

1. ಮುಖ್ಯ ಇಂಜಿನಿಯರರು(ವಿ), ವಲಯ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ/ ಬೆಳಗಾವಿ
2. ಅಧೀಕ್ಷಕ ಇಂಜಿನಿಯರರು(ವಿ), ಕಾರ್ಯ ಮತ್ತು ಪಾಲನಾ ವೃತ್ತ ಹು.ವಿ.ಸ.ಕಂ.ನಿ., ಗದಗ/ಹಾವೇರಿ/ಶಿರಸಿ/ವಿಜಯಪೂರ/ ಬೆಳಗಾವಿ/ಚಿಕ್ಕೋಡಿ/ಬಾಗಲಕೋಟ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ಕಾರ್ಯನಿರ್ವಾಹಕ ಇಂಜಿನಿಯರರು(ವಿ), ಕಾರ್ಯ ಮತ್ತು ಪಾಲನಾ ಗ್ರಾಮೀಣ ವಿಭಾಗ, ಹೆಸ್ಕಾಂ, ಹುಬ್ಬಳ್ಳಿ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
4. ಲೆಕ್ಕಾಧಿಕಾರಿ (ಆಂ.ಪ), ಕಾರ್ಯ ಮತ್ತು ಪಾಲನಾ ಗ್ರಾಮೀಣ ವಿಭಾಗ, ಹೆಸ್ಕಾಂ, ಹುಬ್ಬಳ್ಳಿ ಇವರ ಮಾಹಿತಿಗಾಗಿ
5. ಆಪ್ತ ಕಾರ್ಯದರ್ಶಿ, ಅಧ್ಯಕ್ಷರು, ಹುವಿಸಕಂನಿ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಮಾನ್ಯರ ಗಮನಕ್ಕೆ ಸಲ್ಲಿಸಲು ಕೋರಲಾಗಿದೆ.
6. ವ್ಯವಸ್ಥಾಪ ನಿರ್ದೇಶಕರು ಇವರ ಹಿರಿಯ ಆಪ್ತ ಕಾರ್ಯದರ್ಶಿ, ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಸದರಿ ವಿಷಯವನ್ನು ಮಾನ್ಯರ ಗಮನಕ್ಕೆ ತರುವಂತೆ ಕೋರಲಾಗಿದೆ.
7. ನಿರ್ದೇಶಕರು(ತಾಂತ್ರಿಕ) ಇವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಸದರಿ ವಿಷಯವನ್ನು ಮಾನ್ಯರ ಗಮನಕ್ಕೆ ತರುವಂತೆ ಕೋರಲಾಗಿದೆ..
8. ಮುಖ್ಯ ಆರ್ಥಿಕ ಅಧಿಕಾರಿ ಇವರ ಆಪ್ತ ಕಾರ್ಯದರ್ಶಿಗಳು, ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಸದರಿ ವಿಷಯವನ್ನು ಮಾನ್ಯರ ಗಮನಕ್ಕೆ ತರುವಂತೆ ಕೋರಲಾಗಿದೆ.

ಮಹಾ ಕಡತ/ಕಛೇರಿ ಪ್ರತಿ.